# ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ

ಸಂಖ್ಯೆ: ಕಿ.ರೆ.ಕ್ರಾ.ಸಂಸ್ಥೆ/2020-21 5691/ 8/01/2021 ದಿನಾಂಕ:07/01/2021

**"ಅತೀ ತುರ್ತು"**

**ನೆನಪೋಲೆ-01**

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ,ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಿರಿಯ ರೆಡ್ ಕ್ರಾಸ್ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ.

ಉಲ್ಲೇಖ:1) ಪ್ರಧಾನ ಕಾರ್ಯದರ್ಶಿ ಪ್ರಭಾರ,ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ಇವರ ಪತ್ರ ಸಂಖ್ಯೆ: ಜೆ.ಆರ್.ಸಿ.ಡಬ್ಲ್ಯೂ/15-357/2020-21, ದಿನಾಂಕ:15/05/2020

2) ಪ್ರಧಾನ ಕಾರ್ಯದರ್ಶಿ ಪ್ರಭಾರ,ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ಇವರ ಪತ್ರ ಸಂಖ್ಯೆ:ಐ.ಆರ್.ಸಿ.ಎಸ್/ಜೆ.ಆರ್.ಸಿ.ಆರ್,1188 1221/2020-21, ದಿನಾಂಕ:14/09/2020

3) ಈ ಕಛೇರಿ ಸಮ ಸಂಖ್ಯೆ ದಿನಾಂಕ: 18/05/2020

*** * ***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ-1 ರ ಪತ್ರದಲ್ಲಿ ಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಶಾಖೆಗಳನ್ನು ಪ್ರಾರಂಭಿಸುವ ಸಲುವಾಗಿ ,ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ವಾರ್ಷಿಕವಾಗಿ ಶಾಲಾ ಸದಸ್ಯತ್ವದ ಶುಲ್ಕ ರೂ.100/- ಗಳನ್ನು ಪಾವತಿಸಿ ನೊಂದಾಯಿಸಿಕೊಳ್ಳುವುದು ಹಾಗೂ ಪ್ರೌಢಶಾಲೆಗಳ (8 ರಿಂದ 10 ನೇ ತರಗತಿ ವಿದ್ಯಾರ್ಥಿಗಳು) ರೂ:10/- ಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಪಡೆದು ಅದರಲ್ಲಿ ರೂ:6/- ಗಳನ್ನು ಕಿರಿಯ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಹಾಗೂ ರೂ:4/- ಗಳನ್ನು ಕಿರಿಯ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವಂತೆ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಶಾಖೆಗಳನ್ನು ಪ್ರಾರಂಭಿಸಿ, ವಾರ್ಷಿಕವಾಗಿ ಶಾಲಾ ಸದಸ್ಯತ್ವದ ಶುಲ್ಕ ರೂ:100/- ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ,ಕರ್ನಾಟಕ ರಾಜ್ಯ ಶಾಖೆಗೆ ಡಿಡಿ/ಚೆಕ್ ಮೂಲಕ ಪಾವತಿ ಮಾಡಲು ಮತ್ತು ಪ್ರೌಢಶಾಲೆಗಳ(8 ರಿಂದ 10ನೇ ತರಗತಿ) ಪ್ರತಿ ವಿದ್ಯಾರ್ಥಿಗಳಿಂದ ರೂ:10/- ಗಳನ್ನು ಪಡೆದು ಅದರಲ್ಲಿ ರೂ:6/- ಗಳನ್ನು ಕಿರಿಯ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಉಳಿಸಿಕೊಂಡು ಹಾಗೂ 4/- ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ,ಕರ್ನಾಟಕ ರಾಜ್ಯ ಶಾಖೆಗೆ ಡಿಡಿ/ಚೆಕ್ ಮೂಲಕ ಪಾವತಿ ಮಾಡಲು ಶಾಲಾ ಮುಖ್ಯ ಶಿಕ್ಷಕರಿಗೆ ಸೂಚಿಸಿ ಉಲ್ಲೇಖ-3 ರಲ್ಲಿ ತಿಳಿಸಲಾಗಿತ್ತು.

ಆದಾಗ್ಯೂ ಉಲ್ಲೇಖ(3) ರಂತೆ ಈಗಾಗಲೇ ತಮಗೆ ಕ್ರಮ ವಹಿಸಿ ವರದಿ ಮಾಡಲು ತಿಳಿಸಿದ್ದುರು ಸಹ ಯಾವುದೇ ಕ್ರಮದ ಬಗ್ಗೆ ವರದಿ ಬಂದಿಲ್ಲದಿರುವುದರಿಂದ ಇದನ್ನು ಗಂಭೀರವಾಗಿ ಪರಿಗಣಿಸುತ್ತಾ ಈ ಪತ್ರ ತಲುಪಿದ ಒಂದು ವಾರದಲ್ಲಿ ಎಲ್ಲಾ ಶಾಲಾ ಮುಖ್ಯ ಶಿಕ್ಷಕರು ಕ್ರಮವಹಿಸಿರುವ ವರದಿ ಪಡೆದು ಈ ಕಛೇರಿಗೆ ವರದಿ ಸಲ್ಲಿಸುವುದು ತಿಳಿಸಿದೆ ಹಾಗೂ ಒಂದು ವೇಳೆ ನಿಗದಿತ ಅವಧಿಯಲ್ಲಿ ಮಾಹಿತಿ ಸಲ್ಲಿಸಿದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ನಿಮ್ಮನ್ನೆ ನೇರ ಜವಾಬ್ದಾರಿ ಮಾಡಲಾಗುವುದು.

ಉಪನಿರ್ದೇಶಕರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.

ಗೆ,

1) ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಜಿಲ್ಲೆಯ ಎಲ್ಲಾ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರುಗಳಿಗೆ ಅಗತ್ಯಕ್ರಮಕ್ಕಾಗಿ ಸಲ್ಲಿಸಿದೆ.

**ಪ್ರತಿಯನ್ನು: ಗೌರವಪೂರ್ವಕ ವಂದನೆಗಳೊಂದಿಗೆ**

ಮಾನ್ಯ ಪ್ರಧಾನ ಕಾರ್ಯದರ್ಶಿ- ಪ್ರಭಾರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

INDIAN RED CROSS SOCIETY KARNATAKA STATE BRANCH Date 2432 11/01/21